# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

**ದಿನಾಂಕ: 20.03.2021 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಡಾ॥ ಎಂ. ಜಿ. ಹಳ್ಳಿ ಶಿವರಾಮ್, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ನಾರಾಯಣ, ಹಿರಿಯ ಆರೋಗ್ಯ ಪರಿವೀಕ್ಷಕರು,
3. ಎಂ.ನಾಗರಾಜು.ಬೆಸ್ಕಾಂ
4. ನಾರಾಯಣಸ್ವಾಮಿ, ಮೇಲ್ವಿಚಾರಕರು
5. ರಮೇಶ್, ಸಹಾಯಕ ಕಂದಾಯ ಅಧಿಕಾರಿ
6. ನಿರ್ಮಲ.ಕಂದಾಯ ವಸೂಲಿಗಾರರು.
7. ದೇವರಾಜ್, ಮೇಲ್ವಿಚಾರಕರು
8. ದಾಕ್ಷಯಣಿ ಲಿಂಕ್ ವರ್ಕರ್
9. ಪ್ರಮೀಳ ಲಿಂಕ್ ವರ್ಕರ್
10. ಹರ್ಷಿತ್ ರಾವ್, ವಾರ್ಡ್ ಮಾರ್ಷಲ್
11. ತೇಜಸ್.ಟಿ. ಬೀದಿದೀಪ

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಕಾರ್ಯದರ್ಶಿಗಳು ಇಲ್ಲದ ಕಾರಣ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವತಹಃ ಅಧ್ಯಕ್ಷರೇ ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯು ಪ್ರಾರಂಭವಾಯಿತು.

**ಈ ಹಿಂದಿನ ಸಭೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಅಭಿಯಂತರರ ಗುತ್ತಿಗೆ ಅವದಿಯು ಮುಗಿದಿರುವುದರಿಂದ ಸಹಾಯಕ ಅಭಿಯಂತರರು ಇಲ್ಲದೇ ಸಭೆಗಳು ನಡೆಯುತ್ತಿದ್ದು ಬರುವ ದೂರುಗಳನ್ನು ಪರಾಮರ್ಶಿಸಲು ಸಹಾಯಕ ಅಭಿಯಂತರರ ಅವಶ್ಯಕತೆ ಇರುತ್ತದೆ. ಆದ್ದರಿಂದ ಮುಂದಿನ ಸಭೆಯೊಳಗೆ ಸಹಾಯಕ ಅಭಿಯಂತರರ ವ್ಯವಸ್ಥೆಯನ್ನು ಕಲ್ಪಿಸಬೇಕೆಂದು ಅಧ್ಯಕ್ಷರು ಸಂಬಂಧಪಟ್ಟ ಉನ್ನತ ಅಧಿಕಾರಿಗಳಿಗೆ ಸಮಿತಿವತಿಯಿಂದ ಮನವಿಪತ್ರ ಸಿದ್ಧಪಡಿಸುವಂತೆ ಸೂಚಿಸಿದರು.**

ವಾರ್ಡ್‌ನ ಮಾರ್ಷಲ್‌ರಾದ ಶ್ರೀ.ಹರ್ಷಿತ್ ರಾವ್ ರವರು ಮಾತನಾಡಿ ಲಕ್ಷ್ಮಿದೇವಿನಗರ ಮುಖ್ಯರಸ್ತೆ ರಂಗನಾಥ್ ಬಾರ್ ಪಕ್ಕದಲ್ಲಿ ಖಾಲಿನಿವೇಶನದಲ್ಲಿ ಕಸದ ರಾಶಿಯನ್ನು ಹಾಕುತ್ತಿರುವ ಸಾರ್ವಜನಿಕರಿಗೆ ಬೆಳಗಿನ ಜಾವ 5.00 ಗಂಟೆ ಸಮಯಕ್ಕೆ ಮಾರ್ಷಲ್‌ಗಳು ಕಾದು ಸಾರ್ವಜನಿಕರನ್ನು ಗುರುತಿಸಿ ದಂಡ ವಿಧಿಸಿ ಕಸ ಹಾಕುವುದನ್ನು ತಪ್ಪಿಸಿರುವುದನ್ನು ಸಭೆಗೆ ತಿಳಿಸಿದರು. ಮಾರ್ಷಲ್ ಮತ್ತು ಎಸ್‌ಡಬ್ಲ್ಯೂಎಂ ಸಿಬ್ಬಂದಿಗಳನ್ನು ಅಧ್ಯಕ್ಷರು ಅಭಿನಂದಿಸಿದರು.

**ಕ್ರಮ: ಮಾರ್ಷಲ್‌ಗಳು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.42**

Scanned with CamScanner

ವಾರ್ಡ್ ಸದಸ್ಯರಾದ ಶಶಿಕುಮಾರ್ ರವರು ಮಾತನಾಡಿ ಜೈಭುವನೇಶ್ವರಿನಗರ ಸರ್ಕಾರಿ ಆಸ್ಪತ್ರೆ ಎದುರು ಶೌಚಾಲಯದ ಚೇಂಬರ್ ಹೊಡೆದು ನೀರು ರಸ್ತೆಯಲ್ಲಿ ಹರಿಯುತ್ತಿದ್ದು ಸರಿಪಡಿಸುವ ಬಗ್ಗೆ ಕೇಳಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಜಲಮಂಡಳಿ)ವಾರ್ಡ್ ನಂ.42**

ವಾರ್ಡ್ ಸದಸ್ಯರಾದ ಕವಿತಾ ರವರು ಮಾತನಾಡಿ IR Polly Technic ರಸ್ತೆಯಲ್ಲಿ ಬೀದಿ ದೀಪಗಳು ಇಲ್ಲದಿರುವ ಬಗ್ಗೆ ನೀಡಿದ್ದ ದೂರಿನ ಬಗ್ಗೆ ತಕ್ಷಣವೇ ವಾರ್ಡ್ ನಂ.41 ಕ್ಕೆ ಸೇರಿರುವ ಬೀದಿ ದೀಪಗಳು ಸರಿಪಡಿಸರುವ ಬಗ್ಗೆ ಸಂತೋಷ ವ್ಯಕ್ತಪಡಿಸಿದರು.

ಹಿರಿಯ ಆರೋಗ್ಯ ಪರಿವೀಕ್ಷಕರು ನಾರಾಯಣ ರವರು ಮಾತನಾಡಿ ಕೋವಿಡ್-19 ಸೋಂಕು ಹೆಚ್ಚುತ್ತಿರುವುದರಿಂದ 45 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಕೋವಿಡ್-19 ವ್ಯಾಕ್ಸ್ ನೇಷನ್ ಹಾಕುವ ಸಲುವಾಗಿ ಹಾಗೂ ಸಾರ್ವಜನಿಕರಲ್ಲಿ ಕೋವಿಡ್-19 ಸೋಂಕು ಹೆಚ್ಚುತ್ತಿರುವ ಬಗ್ಗೆ ಜಾಗೃತಿ ಮೂಡಿಸಲು ಕಸದಗಾಡಿಗಳಲ್ಲಿ ಮೈಕ್‌ಗಳ ಮುಖಾಂತರ ಜಾಗೃತಿ ಮೂಡಿಸಲು ತಿಳಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ವಿಭಾಗ)**

ಮೇಲ್ವಿಚಾರಕರಾದ ದೇವರಾಜ್ ರವರು ಮಾತಾನಾಡಿ ಚುನಾವಣಾ ಗುರುತಿನ ಚೀಟಿಯನ್ನು ಸಾರ್ವಜನಿಕರಿಗೆ ಮೊಬೈಲ್ ಓಟಿಪಿ ಮುಖಾಂತರ ಸೈಬರ್ ಸೆಂಟರ್‌ನಲ್ಲಿ ಪಡೆಯುವ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ ರಮೇಶ್ ರವರಿಂದ ಮಾಹಿತಿ ಪಡೆದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಅಧ್ಯಕ್ಷರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎನ್. ಜಿ. ರಮೇಶ್.)
ಪ್ರಭಾರ ಸಹಾಯಕ ಕಾರ್ಯಪಾಲಕ
ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ

(ಡಾ|| ಎಂ. ಜಿ. ಹಳ್ಳಿ ಶಿವರಾಮ್)
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:42

Scanned with CamScanner